ರಾಜ್ಯರಸ್ತೆ ಸಾರಿಗೆ ಬಸ್ಸುಗಳಲ್ಲಿ ಟಿಕೆಟ್ ಪಡೆಯದೆ ಪ್ರಯಾಣಿಸಿದವರ ವಿರುದ್ಧ ವಹಿಸಿದ ಕ್ರಮಗಳು

229 (273) ಶ್ರೀ ಕೆ. ವಸಂತಬಂಗೇರ (ಬೆಳ್ತಂಗಡಿ) ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು 2008–09, 2009–10 ಮತ್ತು 2010–11ನೇ ಸಾಲಿನಲ್ಲಿ ಬಸ್ಸುಗಳಲ್ಲಿ ಟಿಕೇಟ್ ಪಡೆಯದೆ ಪ್ರಯಾಣಿಸಿದ ಎಷ್ಟು ಪ್ರಯಾಣಿಕರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ವಹಿಸಿದೆ;

ಆ) ಎಷ್ಟು ಪ್ರಕರಣಗಳಲ್ಲಿ ದಂಡ ವಸೂಲಿ ಮಾಡಲಾಗಿದೆ, ದಂಡ ವಸೂಲಿಯ ಮೊತ್ತವೆಷ್ಟು;

ಇ) ಎಷ್ಟು ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗಿದೆ;

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು):

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವಾಹನಗಳಲ್ಲಿ ಟಿಕೇಟ್ ಪಡೆಯದೆ ಪ್ರಯಾಣಿಸಿದವರ ಸಂಖ್ಯೆ ಈ ರೀತಿ ಇದೆ.

2008–09	2009–10	2010–11
1,11,945	1,01,303	843,866

ಆ) ವಸೂಲಿ ಮಾಡಿದ ದಂಡದ ಮೊತ್ತ ಮತ್ತು ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದೆ.

ವರ್ಷ	ಒಟ್ಟು ಪ್ರಕರಣಗಳು	ದಂಡದ ಮೊತ್ತ
2008–09	61,535	ರೂ. 80,80,537
2009–10	65,425	ರೂ. 78,41,229
2010–11	53,541	ರೂ. 64,73,121

ಇ) ಗಂಭೀರವಾಗಿ ಪರಿಗಣಿಸಿದ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.

2008–09	2009–10	2010–11 (ಜನವರಿವರೆಗೆ)
1604	1535	1426